**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ ::447/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ರವಿ.ಬಿ.ಎಸ್ | **PW**-12 |
| **ತಂದೆಯ ಹೆಸರು** | : | ಸಣ್ಣೇಗೌಡ | **CW**- 30 |
| **ವಯಸ್ಸು** | : | 44 | |
| **ಉದ್ಯೋಗ** | : | ಪೋಲೀಸ್ ವೃತ್ತ ನಿರೀಕ್ಷಕರು,<br>ಉಪ್ಪಿನಂಗಡಿ ವೃತ್ತ. | |
| **ವಾಸಸ್ಥಳ** | : | ಉಪ್ಪಿನಂಗಡಿ, ದಕ್ಷಿಣ ಕನ್ನಡ. | |

**ದಿನಾಂಕಃ07-03-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

1. ನಾನು 2021 ಏಪ್ರಿಲ್ ರಿಂದ 2022 ಆಗಸ್ಟ್ ರ ವರೆಗೆ ಶೃಂಗೇರಿ ಪೋಲೀಸ್ ಠಾಣೆಯಲ್ಲಿ, ಪೋಲೀಸ್ ನಿರೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

2. ದಿಃ02-04-2021 ರಂದು ಚಾಸಾ-28 ರವರಿಂದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರಿಸಿ ದಿಃ 15-04-2021 ರಂದು ಚಾಸಾ-18 ರವರಿಂದ FSL ವರದಿಯನ್ನು ಸ್ವೀಕರಿಸಿರುತ್ತೇನೆ. ಸದರಿ ದಾಖಲೆಯನ್ನು ನಿಪಿ-30 ಎಂದು ಗುರುತಿಸಲಾಯಿತು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು.

3. ನಂತರ ದಿಃ12-11-2021 ರಂದು ಚಾಸಾ-19 ರವರಿಂದ FSL ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಯನ್ನು ನಿಪಿ-31 ಎಂದು ಗುರುತಿಸಲಾಯಿತು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು. ದಿಃ22-04-2022 ರಂದು ಚಾಸಾ-20 ರವರಿಂದ FSL ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ಸದರಿ ದಾಖಲೆಯನ್ನು ನಿಪಿ-32 ಎಂದು ಗುರುತಿಸಲಾಯಿತು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು. ದಿಃ07-06-2022 ರಂದು ಚಾಸಾ-1 ರವರಿಗೆ ದಾಖಲಾತಿ ಕೋರಿ ಮನವಿ ಸಲ್ಲಿಸಿಕೊಂಡಿರುತ್ತೇನೆ. ಚಾಸಾ-1 ರವರಿಗೆ ನೀಡಿರುವ ವರದಿ ಮತ್ತು ದಾಖಲೆಗಳನ್ನು

ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-33 ಎಂದು ಗುರುತಿಸಲಾಯಿತು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು. ಅದೇ ದಿನ ದಾಖಲೆಗಳನ್ನು ಸ್ವೀಕರಿಸಿಕೊಂಡಿರುತ್ತೇನೆ.

4. ದಿಃ 15-06-2022 ರಂದು ಚಾಸಾ-5 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ17-06-2022 ರಂದು ಚಾಸಾ-21, 25 ಮತ್ತು 26 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

5. ದಿಃ 18-06-2022 ರಂದು ಚಾಸಾ-24 ರವರಿಂದ ಸಿ.ಡಿ ಮತ್ತು ಕಲಂ 65 ಬಿ ಧೃಡೀಕರಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಸಿ.ಡಿ ಯನ್ನು ನೋಡಿ ಗುರುತಿಸಿದ್ದು, ನಿಪಿ-34 ಮತ್ತು 65 ಬಿ ಧೃಡೀಕರಣವನ್ನು ನೋಡಿ ಗುರುತಿಸಿದ್ದು, ನಿಪಿ - 35 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು. ದಿಃ07-07-2022 ರಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ಅಭಿಯೋಜನೆ ಮಂಜೂರಾತಿಗಾಗಿ ಮೇಲಾಧಿಕಾರಿಗೆ ಕೋರಿಕೆಯನ್ನು ಸಲ್ಲಿಸಿರುತ್ತೇನೆ.

6. ನಂತರ ನಾನು ವರ್ಗಾವಣೆಯಾದ ಕಾರಣ ಚಾಸಾ-31 ರವರಿಗೆ ಪ್ರಕರಣದ ಕಡತವನ್ನು ಹಸ್ತಾಂತರಿಸಿರುತ್ತೇನೆ.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ. HRU ವಕೀಲರಿಂದ ::**

1. FSL ನಲ್ಲಿ ನಮೂದಿಸಿದಂತಹ ಯಾವುದೇ ಆಯುಧಗಳು 1 ನೇ ಆರೋಪಿ ಶಬರೀಶರವರ ಮನೆಯಲ್ಲಿ ಇತ್ತು ಎಂಬ ಬಗ್ಗೆ ಯಾವುದೇ ದಾಖಲೆಗಳು ಕಡತದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ FSL ನಮೂದಿಸಿದಂತಹ ಯಾವುದೇ ಆಯುಧಗಳು 1 ನೇ ಆರೋಪಿ ಶಬರೀಶರವರ ಮನೆಯಲ್ಲಿ ಇತ್ತು ಎಂಬ ಬಗ್ಗೆ ಯಾವುದೇ ಫೋಟೋಗಳು ಕಡತದಲ್ಲಿ ಇರುವುದಿಲ್ಲ ಎಂದರೆ ಸರಿ. FSL ಗೆ ಕಳುಹಿಸಿರುವ ಸ್ವತ್ತುಗಳನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

2. ನಿಪಿ-33 ದಾಖಲೆಗಳಿಗೆ ಸಂಬಂಧಿಸಿ ಈ ವರೆಗೂ ಸಹ 1 ನೇ ಆರೋಪಿಯ ವಿರುದ್ಧ ನ್ಯಾಯಾಲಯದಲ್ಲಿ ಯಾವುದೇ ಅಂತಿಮ ವರದಿ ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-34 ಮತ್ತು ನಿಪಿ -35 ಅನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಸಾಕ್ಷಿದಾರರು ಹೇಳಿಕೆಗಳನ್ನು ನೀಡಿರುವುದಿಲ್ಲ, ಸದರಿ ಹೇಳಿಕೆಗಳನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.